Sri B. BASAVALINGAPPA (Minister for Municipal Administeration).—

(*a*) 3-5-1961.

(*b*) Yes.

(*c*) It is being implemented.

(*d*) This question does not arise.

ಶ್ರೀ ಬಿ. ಪುಟ್ಟಸ್ವಾಮಯ್ಯ—ರಾಮನಗರ ಪುರಸಭೆಯ ಚುನಾವಣೆಯು 3—5—1961 ರಲ್ಲಿ ಆಗಿ ಇಲ್ಲಿಗೆ 12 ವರ್ಷವಾಯ್ತು. 12 ವರ್ಷವಾದರೂ ಏಕೆ ಚುನಾವಣೆ ನಡೆಸಿಲಿಲ್ಲ ?

†ಶ್ರೀ ಬಿ. ಬಸವಲಿಂಗಪ್ಪ.—ಚುನಾವಣೆ 1961 ರಿಂದ ಇಲ್ಲಿಯವರೆಗೆ ಮುಂದುವರೆಯುವುದಕ್ಕೆ ಸರಕಾರ ಕಾರಣವಲ್ಲ, ರಾಮನಗರದ ನಿವಾಸಿಗಳು ಮತ್ತು ಪುರಸಭೆಯವರೇ ಇದಕ್ಕೆ ಕಾರಣ ಏಕೆಂದರೆ ನಾವು ಚುನಾವಣೆ ಮಾಡಲು ಪ್ರಾರಂಭಮಾಡುವಾಗ ಹೈಕೋರ್ಟಿಗೆ ಹೋಗಿ ಸ್ಟೇ ತರಲು ಪ್ರಯತ್ನ ಮಾಡಿದರು. 31—7—1962 ರಲ್ಲಿ ಅವರ ತಕರಾರು ಫೈಸಲಾಯ್ತು. ಮೊದಲು ಆಲ್ಲಿ 19,067 ಜನ ಸಂಖ್ಯೆಯಿತ್ತು, ಈಗ ಆದು 30 ಸಾವಿರಕ್ಕೇರಿದೆ. ಮೊದಲು 20 ಜನ ಸದಸ್ಯರಿದ್ದರು, ಈಗ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ 23 ಸದಸ್ಯರನ್ನು ಚುನಾಯಿಸಬೇಕಾಗಿದೆ. 1971 ರ ಜನಗಣತಿ ಪ್ರಕಾರ ಸದಸ್ಯರ ಸಂಖ್ಯೆ ಹೆಚ್ಚಿಸಬೇಕಾಗಿದೆ. ಅದರ ಬಗ್ಗೆ ಆದೇಶ ಕೊಟ್ಟಿದ್ದೇವೆ. ತಕ್ಷಣ ಅಲ್ಲಿ ಚುನಾವಣೆ ನಡೆಸುವಂತೆ ಡೆಪ್ಯೂಟಿಕಮಿಷನರಿಗೆ ತಿಳಿಸಲಾಗಿದೆ. ಚುನಾವಣೆ ನಡೆಯುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—1971ರ ಜನಗಣತಿ ಪ್ರಕಾರ ಕ್ಷೇತ್ರ ವಿಂಗಡಣೆ ಇನ್ನೂ ಆಗಿಲ್ಲ. 1972 ರಲ್ಲೇ ಹೈಕೋರ್ಟಿನ ತೀರ್ಮಾನವಾಗಿದ್ದರೂ ಕ್ಷೇತ್ರ ವಿಂಗಡಣೆ ಮಾಡಿಲ್ಲ. ಯಾವಾಗ ಕ್ಷೇತ್ರ ವಿಂಗಡಣೆ ಮಾಡಿ ಚುನಾವಣೆ ಮಾಡಲಾಗುವುದು ?

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ಇಷ್ಟು ಅಶ್ವಾಸನೆ ಕೊಡಬಹುದು. ಡೆಪ್ಯೂಟಿ ಕಮೀಷನರಿಗೆ ಈ ದಿವಸ ನಿರ್ದೇಶ ಕಳುಹಿಸಿ ಅತಿ ಜಾಗ್ರತೆಯಾಗಿ ಚುನಾವಣೆ ನಡೆಸುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

Promotion of Clerks Working in the Tahsildars Offices of Bangalore District

737. Sri B. PUTTASWAMAIAH (Ramangaram).—

Will the Minister for Revenue be pleaced to state :—

(*a*) the number of clerks of class III cadre working in the Offices of the Tahsildars of Bangalore District ;

(*a*) the number of Tahsildars who have recommended the names of clerks of class III cadre for promotions from the year 1967 to 1969 ;

(*c*) the number of Officials so recommended out of them, the number and the basis on which they were promoted (from 1968 to 1970) ;

(*d*) if no promotion has been given to the clerks so recommended by the Taheildars the names of such persons and the reasons why they have not been given promotions may be furnished ;

(*e*) whether the final seniority list of the said clerks is prepared ; if not, the person responsible for it?

Sri N. HUTCHAMASTHY GOWDA (Minister for Revenue).—

(*a*) 20.

(*b*) 2.

(*c*) 2 (Nobody has been promoted).

(*d*) The following are the names of persons who have not been given promotion:—

(1) Anjanee Rao.

(2) A. Nanjundappa

The Tahsildar of Channapatna has recommended the name of Sri Anjanee Rao for giving promotion on 23rd December 1968. But since the said official did not pass the Revenue Lower Examination required for getting promotion at that time he was not promoted.

The Tahsildar of Hoskote has recommended the name of Sri Nanjundappa f r giving promotion on 15th May 1968 and 30th July 1968. But his application for promotion was rejected since he did not pass the S. S. L. C. examination the minimum qualification required for getting promotion.

(*e*) The seniority list pertaining to clerks of class III cadre and of its equivalent posts has been prepared upto 1967. Suitable action is being taken to make it up-to-date and finalise.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬಡ್ತಿಗೆ 20 ಜನರು ಅರ್ಹರಾಗಿದ್ದಾರೆ, ಇಬ್ಬರ ಹೆಸರನ್ನು ಮಾತ್ರ ತಿಳಿಸಲಾಗಿದೆ. ಉಳಿದ 18 ಜನರ ಹೆಸರನ್ನೇಕೆ ತಿಳಿಸಿಲ್ಲ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಮಾನ್ಯ ಸದಸ್ಯರು ಕೇಳಿರಲಿಲ್ಲ. ಬಡ್ತಿ ಕೊಟ್ಟಿಲ್ಲದಿರುವವರ ಹೆಸರನ್ನು ಮಾತ್ರ ಕೇಳಿದ್ದುದರಿಂದ ಆ ಏವರ ಮಾತ್ರ ಕೊಡಲಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಂಜುಂಡಪ್ಪನವರಿಗೆ ಎಸ್. ಎಸ್. ಎಲ್. ಸಿ. ಆಗಿಲ್ಲವೆಂದ ತಿಳಿಸಲಾಗಿದೆ. ಅವರಿಗೆ ಎಸ್. ಎಸ್. ಎಲ್. ಸಿ. ಆಗಿದ್ದರೆ ಬಡ್ತಿ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇತ್ತೀಚಿನ ವರ್ತಮಾನದ ಪ್ರಕಾರ ಅವರು ಎಸ್. ಎಸ್. ಎಲ್. ಸಿ. ಈಗಲೂ ಕೂಡ ಮಾಡಿಲ್ಲ. ಅವರು ಮಾಡಿದ್ದರೆ ಮುಂದೆ ಖಾಯಂಸೀನಿಯಾರಿಟಿ ಪಟ್ಟಿ ಆದಾಗ ಅವರಿಗೆ ಅರ್ಹತೆಯಿದ್ದರೆ ಪ್ರಮೋಷನ್ ಸಿಕ್ಕುವುದು.

MADAM SPEAKER.—Now Question Hour is over.